## ಭಾರತ-ಟರ್ಕಿ ಸಾಮ್ಯತೆ ಬಿಂಬಿಸುವ 'ಸ್ನೋ'

**ಮಹಿಳಾ ಸಂವೇದನೆಯ ಬಗ್ಗೆ ಪ್ರಶ್ನೆ ಎತ್ತುವ ಒರ್ಹಾನ್, ಸರ್ಕಾರ ಹಾಗೂ ಇಸ್ಲಾಮಿಕ್ ಮೂಲಭೂತವಾದದ ಬಗ್ಗೆಯೂ ಕಾದಂಬರಿಯಲ್ಲಿ ವಿವರಿಸುತ್ತಾರೆ**

# 'ಅತಿಯಾದ ರಾಷ್ಟ್ರೀಯವಾದದಿಂದ ದಾಸ್ಯ'

**ಬೆಂಗಳೂರು:** 'ನಾವು ಈಗ ರಾಷ್ಟ್ರೀಯವಾದದ ನೆರಳಿನಲ್ಲಿ ಬದುಕುತ್ತಿದ್ದೇವೆ. ಆದರೆ, ಅತಿಯಾದ ರಾಷ್ಟ್ರೀಯವಾದದಿಂದ ಮನುಷ್ಯ ದಾಸ್ಯಕ್ಕೆ ಸಿಲುಕಿ ಮಾನವೀಯತೆ ಕಳೆದುಕೊಳ್ಳುತ್ತಾನೆ' ಎಂದು ಲೇಖಕಿ ಕೆ.ಎಸ್. ವೈಶಾಲಿ ಅಭಿಪ್ರಾಯಪಟ್ಟರು. ಟರ್ಕಿ ಲೇಖಕ ಒರ್ಹಾನ್ ಪಾಮುಕ್ ಅವರ 'ಸ್ನೋ' ಕಾದಂಬರಿಯ ಕನ್ನಡ ಅನುವಾದ 'ಹಿಮ' ಕಾದಂಬರಿಯ ಕುರಿತು ಆಯೋಜಿಸಲಾಗಿದ್ದ ಚರ್ಚೆಯಲ್ಲಿ ಅವರು ಮಾತನಾಡಿದರು. 'ರಾಷ್ಟ್ರೀಯವಾದ, ಸೈನ್ಯದ ದುರ್ಬಳಕೆ ಹಾಗೂ ತುರ್ತು ಪರಿಸ್ಥಿತಿ ಸೇರಿದಂತೆ ಹಲವು ಅಂಶಗಳಲ್ಲಿ ಟರ್ಕಿ ಹಾಗೂ ಭಾರತದ ನಡುವೆ ಸಾಮ್ಯತೆ ಇದೆ' ಎಂದರು.




'ಒಂದು ಕಡೆ ಪ್ರಜಾಪ್ರಭುತ್ವ ಎಂದು ಹೇಳುತ್ತಲೇ ಮತ್ತೊಂದು ಕಡೆ ಸೈನ್ಯದ ಮೂಲಕ ಜನರ ಮೇಲೆ ದೌರ್ಜನ್ಯ ಎಸಗುವ ಸನ್ನಿವೇಶವನ್ನು ಲೇಖಕರು ಈ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ' ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಶಬ್ದನಾ ಭಾಷಾಂತರ ಕೇಂದ್ರ ಈ ಕಾರ್ಯಕ್ರಮ ಆಯೋಜಿಸಿತ್ತು. ಲೇಖಕ ಕೆ. ಸತ್ಯನಾರಾಯಣ, ಕೇಂದ್ರದ ಗೌರವ ನಿರ್ದೇಶಕ ಎಸ್.ಆರ್. ವಿಜಯಶಂಕರ್ ಹಾಜರಿದ್ದರು.